# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 554
2. ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 16.12.2021
4. ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಉತ್ತರ ಕರ್ನಾಟಕ ಹಲವು ನೀರಾವರಿ ಯೋಜನೆಗಳು ದಶಕಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಹಾಗಿದ್ದಲ್ಲಿ; ನೆನೆಗುದಿಗೆ ಬಿದ್ದಿರುವ ಉತ್ತರ ಕರ್ನಾಟಕದ ಹಲವು ಮಹತ್ವದ ನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | <u>ಕೃಷ್ಣಾ ಭಾಗ್ಯ ಜಲ ನಿಗಮ:</u> ನಿಗಮದಡಿ ಪ್ರಮುಖವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2 ಈಗಾಗಲೇ ಪೂರ್ಣಗೊಳಿಸಿದ್ದು, 6.20 ಹೆ. ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 ಪ್ರಗತಿಯಲ್ಲಿರುತ್ತದೆ. ಇದಲ್ಲದೇ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಿದ ಇತರ 17 ನೀರಾವರಿ ಯೋಜನೆಗಳು ಕೆರೆ ತುಂಬುವ ಯೋಜನೆಗಳು, ಬ್ರಿಡ್ಜ್ ಕಮ್ ಬ್ಯಾರೇಜ್ ಹಾಗೂ ಕಾಲುವೆ ಆಧುನೀಕರಣ ಯೋಜನೆಯನ್ನು ಸಹ ತ್ವರಿತಗತಿಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಂತೆ ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ. ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.<br><br>ಹೀಗೆ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಎಲ್ಲಾ ಯೋಜನೆಗಳನ್ನು ಆದ್ಯತೆ ಮೇರೆಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಇದರನ್ವಯ ಸರ್ಕಾರದಿಂದ ನೀಡಿದ ಅನುದಾನದಲ್ಲಿ ಈ ಯೋಜನೆಗಳಿಗೆ ಸೂಕ್ತ ಪ್ರಾವಿಧಾನದೊಂದಿಗೆ ಪೂರ್ಣಗೊಳಿಸಲು ಕ್ರಮ ಜರುಗಿಸಲಾಗಿರುತ್ತದೆ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ಕ್ಕೆ ಸಂಬಂಧಿಸಿದಂತೆ ಯೋಜನೆಗೆ ಕೃಷ್ಣಾ ನ್ಯಾಯಾಧೀಕರಣ ಅಂತಿಮ ತೀರ್ಪು–2 ರ ಕೇಂದ್ರ ಸರ್ಕಾರದ ಅಧಿಸೂಚನೆ ಹೊರಡಿಸಲು ಕೇಂದ್ರ ಸರ್ಕಾರದೊಂದಿಗೆ ಸಮನ್ವಯ ಸಾಧಿಸಿ, ತ್ವರಿತವಾಗಿ ಅಧಿಸೂಚನೆ ಹೊರಡಿಸಲು ಕ್ರಮ ಜರುಗಿಸಲಾಗುತ್ತಿದೆ. ಅಧಿಸೂಚನೆಗೆ ಸಮಾನಾಂತರವಾಗಿ ಯೋಜನಾ ಕಾಮಗಾರಿಗಳನ್ನು ಸಹ ಹಮ್ಮಿಕೊಂಡು ಕಾರ್ಯಕ್ರಮದಂತೆ ಅನುಷ್ಠಾನಗೊಳಿಸಲಾಗುತ್ತಿದೆ. ಅಲ್ಲದೇ, AIBP-PMKSY ಕೇಂದ್ರ ಸರ್ಕಾರದ ಕಾರ್ಯಕ್ರಮದಡಿಯ ಮಾರ್ಗಸೂಚಿಗಳನ್ವಯ ಅರ್ಹ ಯೋಜನೆಗಳನ್ನು ಸಹ ಸದರಿ ಕಾರ್ಯಕ್ರಮದಡಿ ಪ್ರಸ್ತಾಪಿಸಿ, ಸಹಾಯಧನ ಪಡೆದು ತ್ವರಿತವಾಗಿ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | **<u>ಕರ್ನಾಟಕ ನೀರಾವರಿ ನಿಗಮ</u>:** ಉತ್ತರ ಕರ್ನಾಟಕ ಭಾಗದ ನೀರಾವರಿ ಯೋಜನೆಗಳ ಪೈಕಿ ಬೆಳಗಾವಿ ಜಿಲ್ಲೆಯ ಬಳ್ಳಾರಿ ನಾಲಾ ಯೋಜನೆಯು ತಾಂತ್ರಿಕ ಅಡಚಣೆಗಳಿಂದ ಪ್ರಗತಿಯಲ್ಲಿ ಕುಂಠಿತವಾಗಿದೆ.<br><br>ಬಳ್ಳಾರಿ ನಾಲಾ ಯೋಜನೆಗೆ ಸಂಬಂಧಿಸಿದಂತೆ ಅರಣ್ಯ ಹಾಗೂ ಪರಿಸರ ತೀರುವಳಿ, ಆರ್&ಆರ್ ಮತ್ತು ಮೋಟಾ ತೀರುವಳಿ ಪಡೆಯುವಲ್ಲಿ ಹಾಗೂ ಭೂಸ್ವಾಧೀನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಆಗಿರುವುದರಿಂದ ಕಾಮಗಾರಿಯನ್ನು ತ್ವರಿತಗತಿಯಿಂದ ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. |
| ಇ) | ಲಕ್ಷಾಂತರ ರೈತರ ಬರಡು ಭೂಮಿಗೆ ನೀರುಣಿಸುವ ಮಹಾಲಕ್ಷ್ಮೀ ಏತ ನೀರಾವರಿ ಏತ ಯೋಜನೆ, ಕರಗಾಂವ ಏತ ನೀರಾವರಿ ಯೋಜನೆ ಮತ್ತು ಶಿವಶಕ್ತಿ ಏತ ನೀರಾವರಿ ಯೋಜನೆಗಳ ಅನುಷ್ಠಾನಕ್ಕಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | **1. ಮಹಾಲಕ್ಷ್ಮೀ ಏತ ನೀರಾವರಿ ಯೋಜನೆ:** ಚಿಕ್ಕೋಡಿ ತಾಲ್ಲೂಕಿನ 17 ಗ್ರಾಮಗಳ ಸುಮಾರು 6400 ಹೇ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು 0.92 ಟಿ.ಎಂ.ಸಿ ನೀರಿನ ಹಂಚಿಕೆಯಾಗಿದೆ. ಸದರಿ ಯೋಜನೆಯ ವಿವರವಾದ ಯೋಜನೆ ವರದಿಯನ್ನು ತಯಾರಿಕೆಯು ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>**2. ಕರಗಾಂವ ಏತ ನೀರಾವರಿ ಏತ ಯೋಜನೆ:** ಸದರಿ ಯೋಜನೆಯ ವಿವರವಾದ ಯೋಜನೆ ವರದಿಯನ್ನು ತಯಾರಿಸಲು ಸರ್ವೆಕನ್ಸಲ್ಟೆನ್ಸಿಗೆ ವಹಿಸಲಾಗಿದ್ದು, ಸದರಿ |
| ಈ) | ಸದರಿ ಯೋಜನೆಗಳ ಪ್ರಕ್ರಿಯೆ ಯಾವ ಹಂತದಲ್ಲಿವೆ; ಈ ಯೋಜನೆಗಳ ಅನುಷ್ಠಾನಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು (ಸಂಪೂರ್ಣ ಮಾಹಿತಿಒದಗಿಸುವುದು). | ಯೋಜನೆಯ ಕುರಿತು ನೀರಿನ ಹಂಚಿಕೆ, ಲಭ್ಯತೆ, ಆರ್ಥಿಕ ಮತ್ತು ತಾಂತ್ರಿಕ ಸಾಧ್ಯ-ಸಾಧ್ಯತೆ ಬಗ್ಗೆ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>**3. ಶಿವಶಕ್ತಿ ಏತ ನೀರಾವರಿ:** ಸದರಿ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ: 27.04.2021 ರಂದು ಅಪರ ಮುಖ್ಯ |
| ಉ) | ರೈತರು ದಶಕಗಳಿಂದ ಬರಡು ಹೊಲಗಳಿಗೆ ನೀರಿನ ಕನಸು ಕಾಣುತ್ತಾ ನಿರೀಕ್ಷಿಸುತ್ತಿರುವ ಈ ಯೋಜನೆಗಳನ್ನು ಯಾವ ಕಾಲಮಿತಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು? (ವಿವರ ನೀಡುವುದು). | ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಚರ್ಚಿಸಿದಂತೆ ಘಟಪ್ರಭಾ ಹಾಗೂ ಹಿರಣ್ಯಕೇಶಿ ನದಿಗಳ yield study ಕೈಗೊಂಡು ಕಾಲುವೆಗಳ working table ತಯಾರಿಸಿ ಹಾಗೂ ಪ್ರಸ್ತುತ ಕಾಲುವೆ ಸುಧಾರಣೆ ಕಾಮಗಾರಿಗಳ ಕುರಿತು ವಿವರವಾದ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದ್ದು. ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ. |

**ಸಂಖ್ಯೆ: ಜಸಂಇ 119 ಡಬ್ಲ್ಯೂಎಲ್ಎ 2021**

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು

## ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ, ವಿಧಾನ ಪರಿಷತ್ ಸದಸ್ಯರು ಇವರ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂ: 554 ಕ್ಕೆ ಅನುಬಂಧ–1

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಯೋಜನೆ | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಆರ್ಥಿಕ ಪ್ರಗತಿ | ಬಾಕಿ ಮೊತ್ತ 01.12.2021 ರಂತೆ | ಪ್ರಸ್ತುತ ಹಂತ ಸಂಕ್ಷಿಪ್ತವಾಗಿ |
|---|---|---|---|---|---|---|---|
| 1 | ಕೃಷ್ಣಾ ಮೇಲ್ದಂಡೆ ಯೋಜನೆ ಹಂತ –1 & 2 | 12190.73 | 622023 | 620000 | 12186.94 | 3.79 | ಪೂರ್ಣಗೊಂಡಿದೆ. |
| 2 | ತಿಮ್ಮಾಪುರ ಏತ ನೀರಾವರಿ ಯೋಜನೆ | 173.00 | 20100 | 17000 | 170.96 | 2.04 | ಪೂರ್ಣಗೊಂಡಿದೆ. |
| 3 | ತೆಗ್ಗಿ ಸಿದ್ದಾಪುರ ಏತ ನೀರಾವರಿ ಯೋಜನೆ | 54.50 | 3000 | 3000 | 53.78 | 0.72 | ಪೂರ್ಣಗೊಂಡಿದೆ. |
| 4 | ರೊಳ್ಳಿಮನ್ನಿಕೆರೆ ಏತ ನೀರಾವರಿ ಯೋಜನೆ | 24.00 | 2450 | 2350 | 23.89 | 0.11 | ಪೂರ್ಣಗೊಂಡಿದೆ. |
| 5 | ಸೊನ್ನ ಏತ ನೀರಾವರಿ ಯೋಜನೆ | 13.11 | 1055 | 906 | 10.90 | 2.21 | ಪೂರ್ಣಗೊಂಡಿದೆ. |
| 6 | ರಾಜನಕೊಳ್ಳೂರು ಏತ ನೀರಾವರಿ ಯೋಜನೆ | 14.20 | 1097 | 1000 | 13.84 | 0.36 | ಪೂರ್ಣಗೊಂಡಿದೆ. |
| 7 | ಬಿಜಾಪುರ ಜಿಲ್ಲೆಯ 16 ಕೆರೆಗಳು ಹಾಗೂ 5 ಬಾಂದಾರಗಳನ್ನು ಹಾಗೂ ಬಾಗಲಕೋಟ ಜಿಲ್ಲೆಯ 7 ಕೆರೆಗಳನ್ನು ಮತ್ತು ಹೆಚ್ಚುವರಿ ಕೆರೆಗಳನ್ನು ಕೃಷ್ಣಾ ನದಿಯಿಂದ ನೀರು ತುಂಬಿಸುವ ಯೋಜನೆ | 250.00 | — | — | 245.00 | 5.00 | ಯೋಜನೆಯನ್ನು ಪೂರ್ಣಗೊಳಿಸಲಾಗಿದ್ದು, ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ |
| 8 | ಬಿಜಾಪುರ ಜಿಲ್ಲೆಯಡಿ ಮಮದಾಪುರ, ಬೇಗಂ ತಲಾಬ್ ಇತ್ಯಾದಿ ಕೆರೆ ತುಂಬುವ ಯೋಜನೆ | 196.00 | — | — | 205.00 | 0.00 | ಯೋಜನೆಯನ್ನು ಪೂರ್ಣಗೊಳಿಸಲಾಗಿದ್ದು, ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ |
| 9 | ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಕೆರೆ ತುಂಬಿಸುವ ಅಣಚಿ ಲಿಫ್ಟ್ ಯೋಜನೆ | | | | | | ಯೋಜನೆಯನ್ನು ಪೂರ್ಣಗೊಳಿಸಲಾಗಿದ್ದು, ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ |
| 10 | ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 8 ಕೆರೆ ತುಂಬಿಸುವ ಸಂಕ ಲಿಫ್ಟ್ ಯೋಜನೆ | | | | | | ಯೋಜನೆಯನ್ನು ಪೂರ್ಣಗೊಳಿಸಲಾಗಿದ್ದು, ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ |
| 11 | ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 8 ಕೆರೆ ತುಂಬಿಸುವ ಬುಯ್ಯಾರ ಲಿಫ್ಟ್ ಯೋಜನೆ | | | | | | ಯೋಜನೆಯನ್ನು ಪೂರ್ಣಗೊಳಿಸಲಾಗಿದ್ದು, ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ |

| ಕ್ರ. ಸಂ. | ಯೋಜನೆ | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಆರ್ಥಿಕ ಪ್ರಗತಿ | ಬಾಕಿ ಮೊತ್ತ 01.12.2021 ರಂತೆ | ಪ್ರಸ್ತುತ ಹಂತ ಸಂಕ್ಷಿಪ್ತವಾಗಿ |
|---|---|---|---|---|---|---|---|
| 12 | ಕೃ.ಮೇ.ಯೋ. ಹಂತ –3 (ಕಾಮಗಾರಿಗಳು & ಭೂಸ್ವಾಧೀನ, ಪು & ಪು) | 51148.94 | 594052 | 88394 | 13320.30 | 37828.30 | 9 ಉಪ ಯೋಜನೆಗಳಲ್ಲಿ 13 ಮುಖ್ಯ ಸ್ಥಾವರಗಳ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಮುಖ್ಯ / ಶಾಖಾ ಕಾಲುವೆ ಒಟ್ಟು 1293.60 ಕಿ.ಮೀ. ಉದ್ದದ ಪೈಕಿ 1205 ಕಿ.ಮೀ. ಪೂರ್ಣಗೊಳಿಸಿದ್ದು 83 ಕಿ.ಮೀ. ಪ್ರಗತಿಯಲ್ಲಿದ್ದು ಮತ್ತು 11.5 ಕಿ.ಮೀ. ನಷ್ಟು ಬಾಕಿ ಇರುವ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.<br>▪ ಕೃಮೇಯೋ ಹಂತ–3 ರಡಿಯಲ್ಲಿ ಒಟ್ಟಾರೆ 1.34 ಲಕ್ಷ ಎಕರೆ ಜಮೀನು ಭೂಸ್ವಾಧೀನ ಹಾಗೂ ಮುಳುಗಡೆ ಹೊಂದುವ 20 ಗ್ರಾಮಗಳ ಮತ್ತು ಬಾಗಲಕೋಟೆ ಪಟ್ಟಣದ ಪುನರ್ ನಿರ್ಮಾಣವನ್ನು ಹೊಸ ಭೂಸ್ವಾಧೀನ ಕಾಯ್ದೆ 2013 ರನ್ವಯ ಕ್ರಮಕೈಗೊಳ್ಳಲಾಗುತ್ತಿದೆ. ಯೋಜನೆಯಡಿ ಇದುವರೆಗೂ 19,876 ಎಕರೆ ಜಮೀನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.<br>▪ ಯೋಜನೆಯಡಿಯ ವಿತರಣಾ ಕಾಲುವೆ ಜಾಲಗಳನ್ನು ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆಯ ಪ್ರಕ್ರಿಯೆಗೆ ಹೊರಡಿಸಿದ ನಂತರ ಸಮಾನಾಂತರವಾಗಿ ಅನುಷ್ಠಾನಗೊಳಿಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. |
| 13 | ರಾಮಥಾಳ (ಮರೋಳ) ಏತ ನೀರಾವರಿ ಯೋಜನೆ | 1075.00 | 38000 | 38000 | 1062.62 | 12.38 | ಯೋಜನೆಯ 2ನೇ ಹಂತದಡಿಯ ಹನಿ ನೀರಾವರಿ ವ್ಯವಸ್ಥೆಯನ್ನು 2017ನೇ ಸಾಲಿನಿಂದ ಕಾರ್ಯಚರಣೆಗೊಳಿಸಲಾಗಿದ್ದು, ಫಲಾನುಭವಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪ್ರಸ್ತುತ ನಿವಾಹಣೆ ಹಂತದಲ್ಲಿರುತ್ತದೆ. |
| 14 | ಸನ್ನತಿ ಏತ ನೀರಾವರಿ ಯೋಜನೆ | 673.90 | 16000 | 10650 | 336.36 | 337.54 | ಮುಖ್ಯ ಸ್ಥಾವರದ ಬಾಕಿ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು, ಕಾಲುವೆ ಜಾಲದ ಕಾಮಗಾರಿಗಳು ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿವೆ. |
| 15 | ಬೂದಿಹಾಳ–ಪೀರಾಪೂರ ಏತ ನೀರಾವರಿ ಯೋಜನೆ | 1250.00 | 20243 | 0 | 414.74 | 835.26 | ಯೋಜನೆಯಡಿ ಮುಖ್ಯ ಸ್ಥಾವರ & ಕಾಲುವೆ ಜಾಲದ ಪೈಪ್‌ಲೈನ್ ಮುಖಾಂತರ ಕೈಗೆತ್ತಿಕೊಳ್ಳುವ ಕಾಮಗಾರಿಗಳು ಪ್ರಗತಿಯಲ್ಲಿವೆ. |

| ಕ್ರ ಸಂ. | ಯೋಜನೆ | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಆರ್ಥಿಕ ಪ್ರಗತಿ | ಬಾಕಿ ಮೊತ್ತ 01.12.2021 ರಂತೆ | ಪ್ರಸ್ತುತ ಹಂತ ಸಂಕ್ಷಿಪ್ತವಾಗಿ |
|---|---|---|---|---|---|---|---|
| 16 | ನಂದವಾಡಗಿ ಏತ ನೀರಾವರಿ ಯೋಜನೆ | 1530.00 | 36100 | 0 | 1045.41 | 484.59 | ಮುಖ್ಯ ಸ್ಥಾವರದ ಕಾಮಗಾರಿ ಬಹುತೇಕ ಪೂರ್ಣಗೊಂಡಿರುತ್ತದೆ. ಯೋಜನೆಯಡಿ 36,100 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರಕ್ಕೆ ಹನಿ ನೀರಾವರಿ ಕಲ್ಪಿಸುವ ಕಾಮಗಾರಿಯನ್ನು ಟರ್ನ ಕೀ ಆಧಾರದ ಮೇಲೆ 3 ಪ್ಯಾಕೇಜ್ ಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಪ್ಯಾಕೇಜ್ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿರುತ್ತವೆ. |
| 17 | ನಾ.ಬ.ದಂ.ಕಾ. ವಿತರಣಾ ಕಾಲುವೆ – 9ಎ | 275.00 | 15250 | 14718 | 277.72 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 18 | ನಾಗರಬೆಟ್ಟ ಏತ ನೀರಾವರಿ ಯೋಜನೆ | 170.70 | 3200 | 0 | 42.02 | 128.68 | ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯ ಬಹುತೇಕ ಪೂರ್ಣಗೊಂಡಿದ್ದು, ಸದರಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ನಿರ್ಮಾಣ ಕಾಮಗಾರಿಗೆ ಇತ್ತೀಚೆಗೆ ಗುತ್ತಿಗೆ ವಹಿಸಲಾಗಿದೆ. |
| 19 | ಹೆರಕಲ್ ದಕ್ಷಿಣ ಏತ ನೀರಾವರಿ ಯೋಜನೆ– ವಿಸ್ತರಣೆ | 238.00 | 6100 | 0 | 52.36 | 185.64 | ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯ ಪ್ರಗತಿಯಲ್ಲಿದ್ದು ಸದರಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ನಿರ್ಮಾಣ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಕ್ರಮ ಜರುಗಿಸಲಾಗುತ್ತಿದೆ. |
| 20 | ಯಳ್ಳಿಗುತ್ತಿ ಏತ ನೀರಾವರಿ ಯೋಜನೆ | 35.00 | 700 | 0 | 14.82 | 20.18 | ಮುಖ್ಯ ಸ್ಥಾವರದ ನಿರ್ಮಾಣ ಕಾಮಗಾರಿಯ ಪ್ರಗತಿಯಲ್ಲಿದ್ದು ಸದರಿ ಯೋಜನೆಯಡಿ ನೀರಾವರಿ ಸೌಲಭ್ಯ ಕಲ್ಪಿಸುವ ಕಾಲುವೆ ಜಾಲದ ನಿರ್ಮಾಣ ಕಾಮಗಾರಿಗೆ ಇತ್ತೀಚೆಗೆ ಗುತ್ತಿಗೆ ವಹಿಸಲಾಗಿದೆ. |
| 21 | ಚಡಚಣ ಏತ ನೀರಾವರಿ ಯೋಜನೆ | 413.20 | 9215 | 0 | 332.10 | 81.10 | ಯೋಜನೆಯಡಿಯ ಮುಖ್ಯ ಸ್ಥಾವರದ ಮತ್ತು ಕಾಲುವೆ ಜಾಲದ ನಿರ್ಮಾಣ ಕಾಮಗಾರಿಯನ್ನು ಟರ್ನ್ ಕೀ ಆಧಾರದ ಮೇಲೆ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಯೋಜನೆಗೆ ಉದ್ದೇಶಿಸಿದ ನೀರಿನ ಪ್ರಮಾಣದ ಲಭ್ಯತೆಗೆ ಅನುಕೂಲ ಹಾಗೂ ಪೂರಕವಾಗಿಸಲು ಭೀಮಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಉಮರಾಣಿ ಬ್ರಿಡ್ಜ್ ಕಂ ಬ್ಯಾರೇಜಿನ ಪುನಶ್ಚೇತನ ಕಾಮಗಾರಿ ಗುತ್ತಿಗೆ ವಹಿಸಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |

| ಕ್ರ. ಸಂ. | ಯೋಜನೆ | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಆರ್ಥಿಕ ಪ್ರಗತಿ | ಬಾಕಿ ಮೊತ್ತ 01.12.2021 ರಂತೆ | ಪ್ರಸ್ತುತ ಹಂತ ಸಂಕ್ಷಿಪ್ತವಾಗಿ |
|---|---|---|---|---|---|---|---|
| 22 | ಬೂದಿಹಾಳ–ಪೀರಾಪೂರ ಏತ ನೀರಾವರಿ ಯೋಜನೆ ವಿಸ್ತರಣೆ | 698.00 | 17805 | 0 | 0.00 | 698.00 | ಯೋಜನೆಗೆ ದಿನಾಂಕ 19.11.2020 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಟರ್ನ್ ಕೀ ಆಧಾರದ ಮೇಲೆ ಮುಖ್ಯ ಸ್ಥಾವರ ಮತ್ತು ಕಾಲುವೆ ಜಾಲದ ಕಾಮಗಾರಿಗೆ ಗುತ್ತಿಗೆ ವಹಿಸಿಲಾಗಿದೆ. |
| 23 | ಕೆರೂರು ಏತ ನೀರಾವರಿ ಯೋಜನೆ | 525.00 | 16000 | 0 | 0.00 | 525.00 | ಯೋಜನೆಗೆ ದಿನಾಂಕ 06.03.2021 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಅದರನ್ವಯ ಸದರಿ ಯೋಜನೆಯ ಮುಖ್ಯ ಸ್ಥಾವರದ ಕಾಮಗಾರಿಗೆ ಕಾಮಗಾರಿಗೆ ಗುತ್ತಿಗೆ ವಹಿಸಿಲಾಗಿದೆ. |
| 24 | ಆಲಮಟ್ಟಿ ಎಡದಂಡೆ ಕಾಲುವೆ ಆಧುನೀಕರಣ ಯೋಜನೆ | 120.00 | 0 | 0 | 72.04 | 47.96 | ಆಲಮಟ್ಟಿ ಎಡದಂಡೆ ಮುಖ್ಯ ಕಾಲುವೆ ಕಿ.ಮೀ.0.00 ದಿಂದ 68.24 (ಆಯ್ದ ರೀಚ್‌ಗಳು) ರ ಆಧುನೀಕರಣದ ಪ್ಯಾಕೇಜ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಪ್ರಸ್ತುತ ವಿತರಣಾ ಕಾಲುವೆ ಜಾಲದ ಆಧುನೀಕರಣದ 3 ಪ್ಯಾಕೇಜ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |
| 25 | ನಾರಾಯಣಪುರ ಬಲದಂಡೆ ಕಾಲುವೆಯ ಕಿ.ಮೀ. 0.00 ರಿಂದ 95.00 ರವರೆಗಿನ ಕಾಲುವೆ ಜಾಲದ (ವಿತರಣಾ ಕಾಲುವೆಗಳ ಹಾಗೂ ಸೀಳುಗಾಲುವೆಗಳ) ಯೋಜನೆ – ಎ.ಐ.ಬಿ.ಪಿ. ಯೋಜನೆ | 2794.00 | 0 | 0 | 713.50 | 2080.50 | ಯೋಜನೆಗೆ ದಿನಾಂಕ 18.07.2019 ರಲ್ಲಿ ರೂ.750.00 ಕೋಟಿ ಅಂದಾಜು ಮೊತ್ತದ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. NRBC ಕಿ.ಮೀ.0.00 ದಿಂದ 95.00 ಆಧುನೀಕರಣ ಕಾಮಗಾರಿಯನ್ನು ಗುತ್ತಿಗೆ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ಪ್ರಸ್ತುತ NRBC-ERM ಯೋಜನೆಯ ರೂ.2794.00 ಕೋಟಿ ಪರಿಷ್ಕೃತ ಅಂದಾಜು ಮೊತ್ತದ ಪ್ರಸ್ತಾವನೆಗೆ ದಿನಾಂಕ 22.04.2021 ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ.<br><br>ಕೇಂದ್ರ ಸಹಾಯಧನ ಪಡೆಯುವ ನಿಟ್ಟಿನಲ್ಲಿ ದಿನಾಂಕ:15.07.2021 ರಂದು ಜರುಗಿದ Screening Committee ಕೇಂದ್ರ ಜಲ ಆಯೋಗ, ನವದೆಹಲಿ ಇಲ್ಲಿ ಚರ್ಚಿಸಲ್ಪಟ್ಟು, ಸದರಿ |

| ಕ್ರ ಸಂ. | ಯೋಜನೆ | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಆರ್ಥಿಕ ಪ್ರಗತಿ | ಬಾಕಿ ಮೊತ್ತ 01.12.2021 ರಂತೆ | ಪ್ರಸ್ತುತ ಹಂತ ಸಂಕ್ಷಿಪ್ತವಾಗಿ |
|---|---|---|---|---|---|---|---|
| | | | | | | | ಯೋಜನೆಯನ್ನು ಕೈಗೆತ್ತಿಕೊಳ್ಳಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ದಿನಾಂಕ:20.07.2021 ರಂದು ತಾತ್ವಿಕ ಅನುಮೋದನೆನೀಡಿರುತ್ತದೆ. ಪ್ರಸ್ತುತ ವಿತರಣಾ ಕಾಲುವೆ ಜಾಲದ ಆಧುನೀಕರಣದ 2 ಪ್ಯಾಕೇಜ ಕಾಮಗಾರಿಗಳಿಗೆ ಇತ್ತೀಚೆಗೆ ಗುತ್ತಿಗೆ ವಹಿಸಲಾಗಿದೆ. |
| 26 | ನಾರಾಯಣಪೂರ ಎಡದಂಡೆ ಕಾಲುವೆ ಜಾಲದ ಆಧುನೀಕರಣ (ಎನ್.ಎಲ್.ಬಿ.ಸಿ.–ಇ.ಆರ್.ಎಂ.) – ಎ.ಐ.ಬಿ.ಪಿ.–ಪಿ.ಎಂ.ಕೆ.ಎಸ್.ವೈ ಯೋಜನೆ | 4699.00 | 0 | 0 | 4172.51 | 526.49 | ಎನ್ಎಲ್ಬಿಸಿ & ಹೆಚ್‌ಬಿಸಿ ಸ್ಕಾಡಾ ಹಂತ–1ರ ಯೋಜನೆಯ (ಪೈಲೆಟ್ ಯೋಜನೆ) ರೂ.139.46 ಗುತ್ತಿಗೆ ಮೊತ್ತದ ಪೈಕಿ ಇಲ್ಲಿಯವರೆಗೆ 115.71 ಕೋಟಿ ಖರ್ಚಾಗಿದ್ದು, ಕಾಮಗಾರಿಯು 2016–17 ಪೂರ್ಣಗೊಂಡಿದ್ದು 5 ವರ್ಷದ ಓ & ಎಂ ಅವಧಿಯಲ್ಲಿದೆ.<br>ಎನ್ಎಲ್ಬಿಸಿ, ಎಸ್‌ಬಿಸಿ, ಎಂಬಿಸಿ, ಜೆಬಿಸಿ & ಐಬಿಸಿ ಸ್ಕಾಡಾ ಹಂತ–2ರ ಯೋಜನೆಯ ರೂ.1123.25 ಗುತ್ತಿಗೆ ಮೊತ್ತದ ಪೈಕಿ ಇಲ್ಲಿಯವರೆಗೆ 299.69 ಕೋಟಿ ಖರ್ಚಾಗಿದ್ದು, 2021–22ನೇ ಸಾಲಿನಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| 27 | ಯಾದಗಿರ್ ಜಿಲ್ಲೆಯಡಿ ಯರಗೋಳ & ಇತರೆ ಕೆರೆ ತುಂಬುವ ಯೋಜನೆ ಮತ್ತು ರಸ್ತೆ ಕಾಮಗಾರಿಗಳು | 55.30 | 0 | 0 | 39.35 | 15.95 | ಸದರಿ ಕೆರೆ ತುಂಬುವ ಯೋಜನೆ ಟರ್ನ ಕೀ ಆಧಾರಿತ ಕಾಮಗಾರಿಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. |
| 28 | ಭೀಮಾ ನದಿಯಿಂದ ನೀರನ್ನು ಎತ್ತಿ ಯಾದಗಿರಿ ಜಿಲ್ಲೆಯ 35 ಕೆರೆ ತುಂಬುವ ಯೋಜನೆ | 352.00 | 0 | 0 | 257.77 | 94.23 | ಯಾದಗೀರ್ ಜಿಲ್ಲೆಯಡಿಯ 35 ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯತ ಕೆರೆಗಳನ್ನು ತುಂಬಿಸುವ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. |
| 29 | ಕೃಷ್ಣಾ ನದಿಯಿಂದ ನೀರನ್ನು ಎತ್ತಿ ರಾಯಚೂರು ತಾಲ್ಲೂಕಿನ 18 ಕೆರೆ ತುಂಬುವ ಯೋಜನೆ | 192.00 | 0 | 0 | 0.00 | 192.00 | ಯೋಜನೆಗೆ ದಿನಾಂಕ 25.01.2021 ರಲ್ಲಿ ಆಡಳಿತಾತ್ಮಕ . ಅನುಮೋದನೆಯನ್ನು ನೀಡಲಾಗಿರುತ್ತದೆ. ಟರ್ನ್ ಕೀ ಆಧಾರದ ಮೇಲೆ ಕಾಮಗಾರಿಗೆ ಗುತ್ತಿಗೆ ವಹಿಸಿಲಾಗಿದೆ. |
| 30 | ಮಲಪ್ರಭಾ ನದಿಗೆ ಅಡ್ಡಲಾಗಿ ಅಡವಿಹಾಳ–ಕೂಡಲಸಂಗಮ ಸೇತುವೆ ನಿರ್ಮಾಣ | 59.80 | 0 | 0 | 43.58 | 16.22 | ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. |

| ಕ್ರ. ಸಂ. | ಯೋಜನೆ | ಇತ್ತೀಚಿನ ಅಂದಾಜು ಮೊತ್ತ | ಯೋಜಿತ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಸೃಜಿಸಲಾಗಿರುವ ನೀರಾವರಿ ಕ್ಷೇತ್ರ ಹೆ.ಗಳಲ್ಲಿ | ಆರ್ಥಿಕ ಪ್ರಗತಿ | ಬಾಕಿ ಮೊತ್ತ 01.12.2021 ರಂತೆ | ಪ್ರಸ್ತುತ ಹಂತ ಸಂಕ್ಷಿಪ್ತವಾಗಿ |
|---|---|---|---|---|---|---|---|
| 31 | ಭೀಮಾ ನದಿಗೆ ಅಡ್ಡಲಾಗಿ 4 ಬ್ಯಾರೇಜುಗಳಿಗೆ ವರ್ಟಿಕಲ್ ಗೇಟುಗಳ ಅಳವಡಿಕೆ | 197.00 | 0 | 0 | 187.54 | 9.46 | ಯಾದಗೀರ, ಜೋಳದಡಗಿ-ಗೂಡೂರ, ಘತ್ತರಗಾ ಮತ್ತು ಕಲ್ಲೂರ 'ಬಿ' ಬ್ಯಾರೆಜಗಳಡಿ ಯಾಂತ್ರಿಕ ಕಾರ್ಯಾಚರಣೆಯ ವರ್ಟಿಕಲ್ ಲಿಫ್ಟ ಗೇಟುಗಳ ಅಳವಡಿಕೆ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತವೆ. |
| 32 | ಕೋರ್ತಿ-ಕೊಲ್ಹಾರ್ ಸೇತುವೆ ಪುನಃಶ್ಚೇತನ | 31.00 | 0 | 0 | 7.53 | 23.47 | ಕೋರ್ತಿ-ಕೋಲ್ಹಾರ ಸೇತುವೆ ಬಲಪಡಿಸುವಿಕೆ ಕಾಮಗಾರಿಗಾಗಿ ಪ್ರಗತಿಯಲ್ಲಿರುತ್ತದೆ. |

*****